

ಬೇಕಾಗುತ್ತಿದೆ. ಅದಕ್ಕಾಗಿ ಜನ ಬಸ್, ಮೆಟ್ರೊ ರೈಲು ಜಾಲ ಮತ್ತಿತರ ಸಾರ್ವಜನಿಕ ಸಾರಿಗೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಲು ಆರಂಭಿಸಿದ್ದಾರೆ. ಟವರ್ ಬ್ರಿಡ್ಜ್, ಬಕಿಂಗ್‌ಹ್ಯಾಮ್ ಪ್ಯಾಲೇಸ್, ಟ್ರಾಫಲ್ಗರ್ ಸ್ಕ್ವೇರ್, ಕೊಹಿನೂರ್ ವಜ್ರ ಇರುವ ಲಂಡನ್ ಟವರ್ ಅರಮನೆ, ಲಂಡನ್ ಐ, ಬ್ರಿಟಿಷ್ ಮ್ಯೂಸಿಯಂ, ವೆಸ್ಟ್‌ಮಿನಿಸ್ಟರ್, ಹೈಡ್‌ಪಾರ್ಕ್, ಕ್ಯೂ ಗಾರ್ಡನ್ಸ್, ಟೇಟ್ ಮಾಡರ್ನ್, ಕೋವೆಂಟ್ ಗಾರ್ಡನ್‌ನಂತಹ ಪ್ರಮುಖ ಪ್ರವಾಸಿ ತಾಣಗಳಿರುವ ಪ್ರತಿ ಮಾರ್ಗದಲ್ಲೂ ಎರಡು, ಮೂರು ನಿಮಿಷಕ್ಕೆ ಒಂದು ಮಹಡಿ ಬಸ್‌ಗಳು, ಪ್ರತಿ ವೃತ್ತದಿಂದಲೂ ಸಂಪರ್ಕ ಸಾಧ್ಯವಾಗುವಂತೆ ಮೆಟ್ರೊ ರೈಲುಗಳು ಸಿಗುತ್ತವೆ. ಯಾವುದೇ ವೃತ್ತದಲ್ಲಿದ್ದರೂ ಮೆಟ್ರೊ ಸುರಂಗ (ಟ್ಯೂಬ್) ನಿಲ್ದಾಣ ತಲುಪಲು ನಾಲ್ಕೂ ಮೂಲೆಗಳಿಂದಲೂ ದಾರಿಗಳಿವೆ.

ಬ್ರಿಟನ್‌ನ ಎಲ್ಲ ನಗರಗಳಲ್ಲೂ ವಾಹನಗಳಿಗಿಂತ ಪಾದಚಾರಿಗಳಿಗೆ, ಬೈಸಿಕಲ್ ಸವಾರರಿಗೆ ಅಧಿಕ ಗೌರವ. ವಾಹನಗಳಿಗೆ ಇರುವಂತಹ ನಿಯಮಗಳು ರಸ್ತೆ ದಾಟುವವರಿಗೂ ಅನ್ವಯವಾಗುತ್ತವೆ. ಭಾರತದ ಯಾವ ನಗರಗಳಲ್ಲೂ ಫುಟ್‌ಪಾತ್ ಪರಿಕಲ್ಪನೆ ಸಾಕಾರಗೊಂಡಿಲ್ಲ. ಎಷ್ಟೋ ಕಡೆ ಫುಟ್‌ಪಾತ್ ಇಲ್ಲ. ಇದ್ದರೂ ಅಂಗಡಿ–ಮುಂಗಟ್ಟುಗಳು, ವ್ಯಾಪಾರಿಗಳು, ಪ್ರಾರ್ಥನಾ ಮಂದಿರಗಳು ಅತಿಕ್ರಮಿಸಿಕೊಂಡಿವೆ. ಪಾದಚಾರಿ ರಸ್ತೆಯಲ್ಲೇ ನಡೆಯುವ ಸ್ಥಿತಿ ಇದೆ. ಭಾರತದಲ್ಲಿ ಪ್ರತಿ ವರ್ಷ ಸರಾಸರಿ 1 ಲಕ್ಷಕ್ಕಿಂತ ಹೆಚ್ಚು ಜನರು ರಸ್ತೆ ಅಪಘಾತಗಳಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಭಾರತಕ್ಕೆ ಹೋಲಿಸಿದರೆ ಬ್ರಿಟನ್‌ನಲ್ಲಿ ಅಪಘಾತದಿಂದ ಮೃತರಾಗುವವರ ಪ್ರಮಾಣ ಶೇ 2ಕ್ಕಿಂತ ಕಡಿಮೆ.

ಸಂಚಾರ ನಿಯಮಗಳನ್ನು ಬ್ರಿಟನ್‌ನಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಪ್ರತಿ ಮಾರ್ಗಗಳಲ್ಲೂ ರಸ್ತೆಗಳಿಗೆ ಸಮಾನಾಂತರವಾಗಿ ಪ್ರತ್ಯೇಕ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಒತ್ತುವರಿಗೆ ಅವಕಾಶವೇ ಇಲ್ಲ. ಪ್ರತಿಯೊಬ್ಬರೂ ರಸ್ತೆ ದಾಟುವಾಗ ಸಿಗ್ನಲ್‌ಗಳಲ್ಲಿ ಹಸಿರು ಬೆಳಗುವವರೆಗೆ ಕಾಯಬೇಕು. ತುರ್ತು ಇದ್ದರೆ ಅಲ್ಲೇ ಸಿಗ್ನಲ್ ಕಂಬದಲ್ಲಿ ಇರುವ ಹಸಿರು ಗುಂಡಿ ಒತ್ತಿದರೆ ಪಾದಚಾರಿ ಸಾಗುವವರೆಗೂ ಇತರೆ ವಾಹನಗಳು ನಿಲ್ಲುತ್ತವೆ. ಗೊತ್ತಿಲ್ಲದೆ ರಸ್ತೆಗೆ ಇಳಿದರೆ ವಾಹನಗಳೇ ನಿಂತು ಸಹಕರಿಸುತ್ತವೆ. ಇಂತಹ ದೃಶ್ಯಗಳು ಇಡೀ ಬ್ರಿಟನ್‌ನ ಉದ್ದಗಲಕ್ಕೂ ಸಿಗುತ್ತಲೇ ಇರುತ್ತವೆ. ಬೈಕ್, ಸ್ಕೂಟರ್ ಸೇರಿದಂತೆ ದ್ವಿಚಕ್ರ ವಾಹನಗಳು ವಿರಳ. ಆಟೊರಿಕ್ಷಾಗಳು ಕಾಣಸಿಗುವುದೇ ಇಲ್ಲ. ದ್ವಿಚಕ್ರ, ತ್ರಿಚಕ್ರ ವಾಹನಗಳು ಜೀವಕ್ಕೆ ಸುರಕ್ಷಿತವಲ್ಲ ಎಂಬ ಭಾವನೆ ಇದಕ್ಕೆ ಕಾರಣ ಇರಬಹುದು. ಸ್ಥಳೀಯವಾಗಿ ಹೆಚ್ಚಿನ ಜನರು ಬೈಸಿಕಲ್‌ಗಳನ್ನೇ ಬಳಸುತ್ತಾರೆ. ಪ್ರತಿ ರಸ್ತೆಯಲ್ಲೂ ಆ್ಯಪ್ ಮೂಲಕ ಪಾವತಿಸಿ–ಬಳಸುವ ವಿವಿಧ ಕಂಪನಿಗಳ ಬೈಸಿಕಲ್‌ಗಳು ಸಿಗುತ್ತವೆ.

## ನೀರಿನ ಬಾಟಲ್ ಕೇಳೋರೆ ಇಲ್ಲ

ಇದೇ ಮೊದಲ ಬಾರಿ ಬ್ರಿಟನ್ ಪ್ರವಾಸಕ್ಕೆ ತೆರಳಿದ್ದ ನನಗೆ ಹೋಟೆಲ್ ಕೊಠಡಿ ಪ್ರವೇಶಿಸಿದ ತಕ್ಷಣ ಅಲ್ಲಿನ ಸಿಬ್ಬಂದಿಗೆ ನೀರಿನ ಬಾಟಲ್ ಇಲ್ಲವಲ್ಲ ಎಂದೆ. ಅದಕ್ಕೆ ನಕ್ಕ ಅವರು ಬಾತ್‌ರೂಂನಲ್ಲಿರುವ ನಲ್ಲಿಯ ನೀರನ್ನೇ ಬಳಸಲು ಹೇಳಿದರು. ಅಲ್ಲಿ



ಸುವ್ಯವಸ್ಥಿತ ಮೆಟ್ರೊ ರೈಲು ಜಾಲ